The Superintendent of Police held a meeting with all the leading members of the Town and local officers. A Peace Committee and Mohalla Committee have been formed to maintain public peace and tranquillity. The District Magistrate promulgated prohibitory order under section 35 of the Mysore Police Act. The situation at present is peaceful and well under control.

Members' Representations

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೇ, ಒಂದು ಪ್ರಾಮುಖ್ಯವಾದ ವಿಚಾರ· ಈ ಸಭೆಗೆ ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಈಗ ಮೂರು ದಿವಸಗಳಿಂದ ಅವರು ಬೇರೆ ಕಡೆ ಹೋಗಿದ್ದರು. ಅವರು ಈ ಸಭೆಗೆ ಬಂದಿರುವಾಗ ನಾನು ಈ ಪ್ರಶ್ನೆಯನ್ನು ಎತ್ತುವುದು ಒಳ್ಳೆಯದು. ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷಗಿರಿ ಬಂದಮೇರೆ ಅವರು ಮುಖ್ಯ ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತೇನೆಂದು ಈ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಮುಖ್ಯಮಂತ್ರಿಗಳ ಸೆಕೆಂಡ್ ಥಾಟ್ಸ್ ವಿಷಯದಲ್ಲಿ ಇವೊತ್ತು ಪ್ರಾಮುಖ್ಯವಾದ ಒಂದು ಸಮಾಚಾರ ಬಂದಿದೆ. ಅದರಲ್ಲಿ ಈ ರೀತಿ ಹೇಳಿದ್ದಾರೆ:

> "Although Chief Minister Nijalingappa had categorically declared in the State Assembly that he would relinquish the office a few days after the current budget session, political circles are seized of advices from Delhi that he was now having second thoughts on it.
>
> "These reports, ascribed to knowledgeable sources, indicate that Mr. Nijalingappa now prefers to continue as Chief Minister and give up the Congress Presidentship, because, he seems to feel that to quit the State at this juncture may seriously weaken the organisation in view of the growing internal dissidence."

ಅವರು ಈ ಸಭೆಯಲ್ಲಿ ಹೇಳಿಕೆಯನ್ನು ಕೊಟ್ಟಮೇಲೆ ಎರಡನೇ ಯೋಚನೆ ಅವರ ತಲೆಯಲ್ಲಿ ರಿವೀರ್ ಆಗುತ್ತಿದೆ. ಈ ಒಂದು ವಿಚಾರ ಬಹಳ ಗಂಭೀರವಾಗಿ ಪತ್ರಿಕೆಯಲ್ಲಿ ಬಂದಿದೆ. ಮುಖ್ಯ ಮಂತ್ರಿಗಳು ಈ ವಿಚಾರವನ್ನು ಕೇಳಿ ನಗುತ್ತಿದ್ದಾರೆ. ಅವರಿಗೆ ನಗು ಬಂದಿದೆ.

ಎರಡನೇ ವಿಚಾರ, ಇವರಿಗೆ ಹೇಗೆ ಗೊತ್ತಾಯಿತು ಎಂದು ಅವರು ನಗುತ್ತಾ ಇರಬೇಕು. ಇವೊತ್ತು ನಮಗೆ ಇದು ಕುತೂಹಲವನ್ನು ಹಾಸ್ಯ ಮಾಡುತ್ತಿದೆ. ಏತಕ್ಕೆಂದರೆ ಮುಖ್ಯ ಮಂತ್ರಿಗಳು ದೆಹಲಿಗೆ ಹೋದಾಗ ಒಂದು ಹೇಳಿಕೆಯನ್ನು ನೀಡುತ್ತಾರೆ. ಇಲ್ಲಿಗೆ ಬಂದಾಗ ಒಂದು ಹೇಳಿಕೆಯನ್ನು ನೀಡುತ್ತಾರೆ. ನಾವು ತಿಳಿದುಕೊಂಡೆವು, ಮುಖ್ಯ ಮಂತ್ರಿಗಳಿಗೆ ಈ ವಿಚಾರದ ಬಗ್ಗೆ ಯಾಕೆ ಈ ರೀತಿ ಎರಡನೆ ಯೋಚನೆ ಅವರ ತಲೆಯಲ್ಲಿ ಹುಟ್ಟಿದೆ ಎಂದು. ಆದ್ದರಿಂದ ಈ ವಿಚಾರದಲ್ಲಿ ಅವರು ನಮಗೆ ಒಂದು ಸಮಾಧಾನವಾಗುವ ರೀತಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ಅವರು ಎಲ್ಲಿ ಬೇಕಾದರೂ ಇರಲಿ. ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಲ್ಲಿರಲಿ ಅಥವಾ ಮುಖ್ಯಮಂತ್ರಿಗಳಾಗಿ ಇಲ್ಲಿರಲಿ. ಅವರು ಎರಡೂ ಕಡೆ ಇರುವುದಕ್ಕೆ ಪ್ರಯತ್ನ ಮಾಡುವಾಗ ನಮಗೆ ಒಂದು ಸಂಶಯ ಹುಟ್ಟುತ್ತದೆ. ಅದಕ್ಕೋಸ್ಕರವಾಗಿ ಕರಾರುವಾಕ್ಕಾಗಿ ಈ ವಿಚಾರದಲ್ಲಿ ಏನು ವರ್ತಮಾನ ಎಂಬುದನ್ನು ಈ ಸಭೆಗೆ ತಿಳಿಸಿದರೆ ಒಳ್ಳೆಯದು. ಆದ್ದರಿಂದ ಈ ವಿಚಾರದಬಗ್ಗೆ ಅವರು ಏನು ತೀರ್ಮಾನ ಮಾಡಿದ್ದಾರೆ, ಇಲ್ಲಿ ಇರತ್ತಾರೆಯೆ ಅಥವಾ ಅಲ್ಲಿ ಇರುತ್ತಾರೆಯೆ, ಇಲ್ಲ ಎರಡೂ ಕಡೆಯೂ ಇರುತ್ತಾರೆಯೇ ಎಂಬುದನ್ನು ಅಚ್ಚೊರಾಗಿ ತಿಳಿಸಬೇಕು ಎಂದು ನಾನು ಸಭಾಪತಿಯವರ ಮೂಲಕ ಕೇಳಿಕೊಳ್ಳುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈಚೆಗೆ ಮೊನ್ನೆ ನಾನು ದೆಹಲಿಯಲ್ಲಿದ್ದಾಗ ನನಗೆ ತಿಳಿದು ಬಂದಿದೆ, ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರ ಪದವಿಗೆ ರಾಜೀನಾಮೆಯನ್ನು ಕೊಡುವುದಾಗಿ ಅವರು ಅವರ ದೆಹಲಿಯ ಸ್ನೇಹಿತರಿಗೆ ಹೇಳಿದ್ದಾರೆ ಎಂದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಶುದ್ಧ ಸುಳ್ಳು. ಸುಳ್ಳಿನಲ್ಲಿ ಅಪ್ಪಟ ಸುಳ್ಳು.

ಶ್ರೀ ಎನ್. ಗೋಪಾಲಗೌಡ.—ದೆಹಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆಫೀಸಿನ ಪಕ್ಕ ಧಲ್ಲ ''ಕೇರಳ ಹೌಸ್'' ನಲ್ಲಿ ನಾನು ಇವ್ವೆ. ಅಲ್ಲಿ ನನಗೆ ಬಹಳ ಹತ್ತಿರದಿಂದ ಈ ವಿಷಯ ಗೊತ್ತಾಯಿತು. ಆದ್ದರಿಂದ ಅವರು ಅದನ್ನು ಬಿಡುವುದಾದರೆ ನಮಗೇನೂ ಇದರ ಬಗ್ಗೆ ಅಷ್ಟು ವಿವಂಚನೆ ಇಲ್ಲ. ಈ ರಾಜ್ಯದ ಸ್ಥಿತಿಗತಿಗಳು ಅನಿಶ್ಚಿತ ರೀತಿಯಲ್ಲಿ ಇವೆ. ನವಂಬರ್ ತಿಂಗಳಿನಲ್ಲಿ ಇದನ್ನು ಬಿಡುತ್ತೇನೆಂದು ಹೇಳಿದ್ದರು. ಡಿಶೆಂಬರ್ ತಿಂಗಳಾಯಿತು, ಹಾಗೆಯೇ ಜನವರಿ, ಫೆಬ್ರುವರಿ, ಮಾರ್ಚ್, ಏಪ್ರಿಲ್ ತಿಂಗಳೂ ಆಯಿತು. ಇಲ್ಲಿಯೇ ಇದ್ದಾರೆ. ಬಹುಶಃ ಇದೇ ಸ್ಥಿತಿ ಮುಂದುವರಿಯುವುದಾದರೆ ಈ ರಾಜ್ಯಕ್ಕೆ ಇದು ದುರದೃಷ್ಟಕರವಾದ ವಿಷಯ ಆಗುತ್ತದೆ, ಆದ್ದರಿಂದ ಯಾವುದಾದರೂ ಒಂದು ವಿಷಯವನ್ನು ಅವರು ಖಚಿತವಾಗಿ ಹೇಳಿದರೆ ಈ ಒಂದು ಉಹಾಪೋಹ ನಿಲ್ಲುವುದಕ್ಕೆ ಸಹಾಯಕವಾಗುತ್ತದೆ. ನಾನು ತಮ್ಮನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ತಾವು ಯಾವುದಾದರೂ ಒಂದು ಖಚಿತವಾದ ವಿಷಯವನ್ನು ಹೇಳಬೇಕು ಎಂದು.

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ ಅಷ್ಟೇ ಪ್ರಾಮುಖ್ಯವಾದ ಇನ್ನೊಂದು ವಿಷಯವನ್ನು ನಾನು ಹೇಳಬೇಕಾಗಿದೆ. ಯಾರ ಯಾರಮೇಲೆ ಲಂಚದ ಆಪಾದನೆ, ಆಕ್ಷೇಪಣೆಗಳು ಇವೆ, ಆ ವಿಷಯಗಳನ್ನು ವಿಚಾರಣೆ ಮಾಡುತ್ತೇನೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆತಾನೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳಾಗಿದ್ದವರು, ಮಂತ್ರಿಗಳಾಗಿದ್ದವರು, ಉಪಮಂತ್ರಿಗಳಾಗಿದ್ದವರು, ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದವರು, ಪ್ರಧಾನ ಕಾರ್ಯದರ್ಶಿಗಳಾಗಿದ್ದವರುಗಳ ಅಸ್ತಿ ಪಾಸ್ತಿಗಳ ವಿಚಾರಣೆ ಮಾಡತಕ್ಕ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ನಾನು ಒಬ್ಬ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರೇನೋ ಎಲ್ಲರನ್ನೂ ವಿಚಾರಣೆ ಮಾಡುತ್ತೇನೆ ಎಂದು ಹೇಳುತ್ತಾರೆ. ಈಗ ನನಗೆ ಸಂಬಂಧಪಟ್ಟ ಆಪಾದನೆಗಳ ವಿಷಯದಲ್ಲಿ ಬರೆದರೆ ನಾನು ಅದಕ್ಕೆ ಕಡ್ಡಾಯವಾಗಿ ಉತ್ತರ ಕೊಡಬೇಕಾದ ಅಗತ್ಯವಿಲ್ಲ. ಇವೊತ್ತು ನಾನು ಕಾಂಗ್ರೆಸ್ಸಿನಲ್ಲಿ ಇಲ್ಲ. ನಾನು ಈಗ ಕಾಂಗ್ರೆಸ್ಸಿನಲ್ಲಿ ಇಲ್ಲದೇ ಇರುವುದರಿಂದ ಕಾಂಗ್ರೆಸ್ ಪಕ್ಷದ ಶಿಸ್ತಿಗೆ ಹೇಗೆ ಒಳಪಡುವುದಕ್ಕಾಗುತ್ತದೆ ? ಅದ್ದರಿಂದ ಪಕ್ಷದ ಶಿಸ್ತಿಗೆ ಒಳಪಡದೆ ಇರುವವರ ಬಗ್ಗೆ ಬರುವಂತಹ ಆಪಾದನೆಗಳಿಗೆ ಉತ್ತರ ಕೊಡುವುದಾಗಲೀ, ವಿಚಾರಣೆಗೆ ಒಳಪಡುವುದಾಗಲೀ ಅಗತ್ಯ ಇರುವುದಿಲ್ಲ, ಕಡ್ಡಾಯ ಇರುವುದಿಲ್ಲ. ಆದ್ದರಿಂದ ಇಂಥಾ ವಿಷಯದಲ್ಲಿ ತಾವು ಕಡ್ಡಾಯವಾಗಿ ಯಾರು ಯಾರಿಗೆ ನಿಮ್ಮನ್ನು ವಿಚಾರಣೆ ಮಾಡಬೇಕಾಗಿದೆ, ನಿಮ್ಮ ಮೇಲೆ ಆಕ್ಷೇಪಣೆ ಇದೆ ಎಂದು ತಿಳಿಸಿದರೆ ಆಗುವುದಿಲ್ಲ. ವಿಚಾರಣೆಗೆ ಒಳಪಡತಕ್ಕವರು ಒಪ್ಪಿಕೊಳ್ಳುವಂತಹ ಸ್ಥಿತಿಯಲ್ಲಿದ್ದರೆ ಅವರ ಹೇಳಿಕೆ ವಿಚಾರಣೆ ಆಗಬೇಕೆ ಹೊರತು, ಒಪ್ಪಿಕೊಳ್ಳದೇ ಇರುವವರ ವಿಷಯದಲ್ಲಿ ಇದು ಏನು ಪ್ರಯೋಜನವಾಗುವುದಿಲ್ಲ. ಅದಕ್ಕೆ ತಾವು ಏನಾದರು ಒಂದು ಕಮಿಷನ್ ಆಫ್ ಎನ್‌ಕ್ವೈರಿ ಮಾಡಿ ಯಾರ ಯಾರ ಮೇಲೆ ಆಕ್ಷೇಪಣೆ ಇದೆಯೋ ಅಂತಹವರಿಗೆಲ್ಲಾ ನೋಟೀಸ್ ಕಳಿಸಬೇಕು. ಈ ರೀತಿ ನೋಟೀಸ್ ಕಳಿಸುವಾಗ, ಯಾರಿಗೆ ಕಳಿಸುತ್ತೀರೋ ಅವರು ಒಪ್ಪಿಕೊಳ್ಳುವಂತೆ ಇರಬೇಕು. ಸಾರ್ವಜನಿಕ ಹಿತದೃಷ್ಟಿಯಿಂದ ನೀವು ಎನ್‌ಕ್ವೈರಿ ಮಾಡಬೇಕೆಂದಿದ್ದರೆ ಈ ಸಭೆಯ ಅನುಮತಿ ಪಡೆದು ಮಾಡಿದರೆ ಒಳ್ಳೆಯದೆಂದು ನಾನು ಹೇಳುತ್ತೇನೆ. ನಮುನ್ನೇಶ ಇಟ್ಟುಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಎನ್‌ಕ್ವೈರಿ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ಒಳ್ಳೆಯದು. ಈ ಬಗ್ಗೆ ತಮ್ಮ ಅಭಿಪ್ರಾಯವೇನು ಎಂಬುದನ್ನು ಈ ಸಭೆಯ ಮೂಲಕ ತಿಳಿಸಿದರೆ ಒಳ್ಳೆಯದೆಂದು ಆಶಿಸುತ್ತೇನೆ.

†ಶ್ರೀ ಎಚ್. ಎಂ. ಚೆನ್ನಬಸಪ್ಪ (ಪಿರಿಯಾಪಟ್ಟಣ). -- ಶ್ರೀ ಹುಚ್ಚಮಾಸ್ತಿಗೌಡರು ಕೇಳಿರಕ್ಕಂಥ ಪ್ರಶ್ನೆ ಬಹಳ ಮಹತ್ವವಾದುದು. ಆದರೆ ಶ್ರೀ ಶಿವಪ್ಪನವರು ಕೇಳಿದ ಪ್ರಶ್ನೆ ಅಷ್ಟು ಮಹತ್ವದ್ದೂ ಅಲ್ಲ. ಈಗಾಗಲೇ ಮುಖ್ಯಮಂತ್ರಿಗಳು ಬಿಟ್ಟು ಹೋಗುತ್ತೇನೆಂದು ಹೇಳಿದಮೇಲೆ ಪುನಃ ಅದೇ ಪ್ರಶ್ನೆಯನ್ನು ಕೇಳುವುದು ಸರಿಯಲ್ಲ. ನಮಗೆ ನಾಲಿಗೆ ಒಂದೋ ಅಥವಾ ಎರಡೋ ಇರುವುದು ? ಖಚಿತವಾಗಿ ಅವರು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು ಹೋಗುತ್ತೇನೆಂದು ಹೇಳಿದಮೇಲೆ ಮತ್ತೆ ಒತ್ತಾಯ ಮಾಡಿ ಕೇಳುವುದು ಸರಿಯಲ್ಲ. ಇನ್ನು ಎರಡನೆಯ ಪ್ರಶ್ನೆ ಬಹಳ ಉನ್ನತವಾದ ಅಂತ.

ನಮಗೂ ಸಹ ರಿಫಾರಮ್ಸ್ ಕಮೀಷನ್‌ನಲ್ಲಿ ಕಷ್ಟಬಂದಿದೆ. ಈ ದೇಶದಲ್ಲಿ ಆಗಿರುವ ಅನೀತಿಯುತ ವಾದಂಥ ಅತ್ಯಾಚಾರ ಮತ್ತು ಅನಾಚಾರಗಳು ಏನೇನು ಇವೆ ಅವುಗಳನ್ನು ಉತ್ತಮಪಡಿಸ ಬೇಕಾದರೆ ಹಿಂದಿನ ಮಂತ್ರಿಮಂಡಲದಲ್ಲಿ ಇದ್ದವರನ್ನು, ಈಗಿನ ಮಂತ್ರಿಮಂಡಲದಲ್ಲಿ ಇರುವವರನ್ನು, ಮತ್ತು ಮುಂದಿನ ಮಂತ್ರಿಮಂಡಲದವರನ್ನು ಎನ್‌ಕ್ವೈರಿ ಮಾಡಿದರೆ ಒಳ್ಳೆಯದು. ಇದರಿಂದ ಮುಂದೆ ಬರುವವರು ಉತ್ತಮವಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿರುವ ಬಗ್ಗೆ ನನಗೆ ಬಹಳ ಸಂತೋಷ ವಾಯಿತು. 1947ನೇ ಇಸವಿಯಿಂದ ಇದುವರೆಗೆ ಯಾರು ಯಾರು ಮಂತ್ರಿಗಳಾಗಿದ್ದರು, ಯಾರು ಯಾರು ಬೇರೆ ಬೇರೆ ಸರ್ಕಾರಿ ಹುದ್ದೆಗಳಲ್ಲಿ ಇದ್ದರು ಅವರ ಬಗ್ಗೆ ಅಮೂಲಾಗ್ರವಾಗಿ ತನಿಖೆ ಮಾಡಿಸ ಬೇಕು, ಅವರ ಆಸ್ತಿಪಾಸ್ತಿಗಳ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿದರೆ ಮುಂದೆ ಆಡಳಿತ ನಡೆಸಲು ಬರುವವರಿಗೆ ಎಚ್ಚರಿಕೆಯಾಗುತ್ತದೆ. ಮತ್ತು ಇದರಿಂದ ಅನೀತಿ ಮತ್ತು ಅತ್ಯಾಚಾರಗಳು ಆಡಳಿತ ಮಟ್ಟದಲ್ಲಿ ಕೂಡ ಕಡಿಮೆಯಾಗುತ್ತವೆ. ನೈತಿಕವಾಗಿ ಎಲ್ಲರೂ ತಾವಾಗಿಯೇ ತಮ್ಮ ಆಸ್ತಿಪಾಸ್ತಿಗಳ ಲೆಕ್ಕವನ್ನು ಕೊಡಬೇಕು, ಕೊಡದಿದ್ದರೆ ಏನೂ ಮಾಡುವು ದಕ್ಕಾಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅದು ಸರಿಯಲ್ಲ. ಅಧಿಕಾರಿ ಗಳು ಏನಾದರು ತಪ್ಪು ಮಾಡಿದರೆ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾನೂನು ಮಾಡಿಟ್ಟಿದ್ದೇವೆ. ಆದರೆ ಮಂತ್ರಿಗಳೇ ತಪ್ಪುಮಾಡಿ ಕ್ರಮತೆಗೆದುಕೊಳ್ಳದಿದ್ದರೆ ಬೇಲಿಯೇ ಹೊಲಮೇದಂತೆ ಆಗುತ್ತದೆ. ಇವರನ್ನು ಕೇಳುವವರು ಯಾರೂ ಇಲ್ಲದಿದ್ದರೆ ದೇಶಕ್ಕೆ ಉಳಿಗಾಲ ವಿಲ್ಲ, ಮತ್ತು ಸ್ವಾತಂತ್ರ್ಯವೂ ಸಹ ಉಳಿಯುವುದಿಲ್ಲ. ಅದಕ್ಕೋಸ್ಕರವಾಗಿ ಮಾನ್ಯಮಂತ್ರಿಗಳು ಈಗ ಏನು ಒಂದು ನಿಲುವು ತೆಗೆದುಕೊಂಡಿದ್ದಾರೆ ಆ ನಿಲುವನ್ನು ಇನಷ್ಟು ಪುಷ್ಟೀಕರಿಸಿ ಒಂದು ಕಮಿ ಷನ್ ಆಫ್ ಎನ್‌ಕ್ವೈರಿ ಏರ್ಪಾಡು ಮಾಡಿದರೆ ಒಳ್ಳೆಯದು. ಯಾರು ದೇಶದ ಹಿತವನ್ನು ಕಾಪಾ ಡಿಲ್ಲವೋ, ಯಾರು ನೀತಿಬಾಹಿರವಾಗಿ ಕೆಲಸ ಮಾಡಿವ್ದಾರೋ ಅಂತವರಿಗೆ ಶಿಕ್ಷೆ ವಿಧಿಸಲೇಬೇಕು ಈ ರೀತಿ ಕ್ರಮ ತೆಗೆದುಕೊಂಡರೆ ತಮ್ಮ ಕೀರ್ತಿ ಜಾಸ್ತಿಯಾಗುತ್ತದೆ, ಈ ರೀತಿ ಮಾಡದಿದ್ದರೆ ತಮ್ಮ ಮೇಲೆ ಅಪವಾದ ಜಾಸ್ತಿಯಾಗುತ್ತದೆ. ಈ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ನೀವು ಇದ್ದರೂ ಸಹ ನಿಮ್ಮ ಅಕ್ಕಪಕ್ಕದವರು ಬಿಡುತ್ತಿಲ್ಲ, ಅದೇ ಬಂದಿರುವ ಗ್ರಹಚಾರ. ಇಡೀ ಭರತಖಂಡಕ್ಕೆ ಮಾದರಿಯಾಗುವ ರೀತಿಯಲ್ಲಿ ಎನ್‌ಕ್ವೈರಿ ಮಾಡಿದ್ದೇ ಆದರೆ ನಾವೆಲ್ಲರೂ ನಿಮಗೆ ತರಣಾಗುತ್ತೇವೆ. ಈ ಬಗ್ಗೆ ಇಷ್ಟು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಶ್ರೀಪಾನ್ ಹುಚ್ಚಮಾಸ್ತಿಗೌಡರು ಕೇಳಿರ ತಕ್ಕಂಥ ಪ್ರಶ್ನೆ ಮುಖ್ಯವಾಪದು ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಸಭೆಯ ಸದಸ್ಯರ ಒಪ್ಪಿಗೆಯಂತೆ ಯಾರು ಯಾರು ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ನೋಟೀಸ್ ಕಳಿಸಲು ರುಜುಮಾಡಿ ಇಟ್ಟಿದ್ದೇನೆ. ಇವತ್ತು ಕಳಿಸಬಹುದು. ಮಂತ್ರಿಗಳಾಗಿ, ಕಾಂಗ್ರೆಸ್ ಪ್ರೆಸಿಡೆಂಟರಾಗಿ, ಕಾಂಗ್ರೆಸ್ ಸೆಕ್ರೆಟರಿಗಳಾಗಿ ಯಾರು ಯಾರು ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ ಮತ್ತು ಏನೇನು ಅನ್ಯಾಯ ಮಾಡಿದ್ದಾರೆ ಎಂಬ ವಿಚಾರಗಳನ್ನು ತಿಳಿದುಕೊಳ್ಳದೆ ಕಮಿಷನ್ ನೇಮಕ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ಕೇಂದ್ರಸರ್ಕಾರದವರು ಒಂದು ಕಾನೂನು ಮಾಡು ವವರಿದ್ದಾರೆ. ಕೇಂದ್ರದವರು ಮಾಡುವ ಕಾನೂನು ಎಲ್ಲರಿಗೂ ಅನ್ವಯವಾಗುವುದಾದರೆ ನಾವು ಪುನಃ ಕಾನೂನು ಮಾಡುವ ಅಗತ್ಯವಿಲ್ಲ. ಈ ಮಧ್ಯೆ ನಾವು ಕೂಡ ಈ ವಿಚಾರದಲ್ಲಿ ಸ್ವಲ್ಪ ವಿಷಯ ಗಳನ್ನು ಸಂಗ್ರಹ ಮಾಡೋಣ. ಅಧಿಕಾರಕ್ಕೆ ಬರುವ ಮೊದಲು ಯಾರು ಸಾಹುಕಾರರಾಗಿದ್ದರು, ಯಾರು ಭಿಕಾರಿಗಳಾಗಿದ್ದರು, ಅವರು ಆಸ್ತಿಪಾಸ್ತಿ ಮಾಡಿದ್ದರೆ ಅವರಿಗೆ ಎಲ್ಲಿಂದ ಬಂತು, ಸಂಪಾ ದನೆ ಯಾವ ರೀತಿ ಆಯಿತು, ಅವರ ಸಂಬಳ ಅಲ್ಲದೆ ಗಿಂಬಳ ಏನಾದರು ಇತ್ತೋ ಎಂಬ ಬಗ್ಗೆ ವಿವರ ಗಳನ್ನು ಸಂಗ್ರಹಿಸಬೇಕೆಂದು ಈ ಮನೆಯ ಸದಸ್ಯರು ಅಭಿಪ್ರಾಯಪಟ್ಟಿದ್ದರಿಂದ, ಅದು ಆಗ ಬೇಕಾದುದು ಅವಶ್ಯಕವೆಂದು ನಾನು ಒಪ್ಪಿದ್ದರಿಂದ ನೋಟೀಸ್ ಕಳಿಸಬೇಕೆಂದು ತೀರ್ಮಾನ ವಾಗಿದೆ. ಇವತ್ತು ಕಳಿಸಿದ್ದೇನೆ. ಈ ರೀತಿ ಮಾಡುವುದರಿಂದ ಹಿಂದೆ ಪ್ರಾಮಾಣಿಕರಾಗದಿದ್ದ ವರು ಮುಂದೆ ಪ್ರಾಮಾಣಿಕರಾಗಬಹುದೆಂಬ ಆಶೆ ಇದೆ. ಈ ವಿಚಾರದಲ್ಲಿ ಸರ್ಕಾರದವರೇನು ದಡ್ಡರಲ್ಲ. ಎಲ್ಲರೂ ನೋಟೀಸ್‌ಗೆ ಉತ್ತರ ಕೊಡುತ್ತಾರೆಂದು ನಿರೀಕ್ಷಿಸಿದ್ದೇನೆ.

ಶ್ರೀ ಬಿ. ಭಾನ್ಕರಶೆಟ್ಟಿ (ಕಾಪು).—ಯಾರು ಯಾರಿಗೆ ನೋಟೀಸ್ ಕಳಿಸಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ಎದ್ದು ರಾಮನಿಗೆ ಸೀತೆ ಏನಾಗಬೇಕು ಎಂದು ಕೇಳಿದಂತಾಗಿದೆ. ಯಾರು ಯಾರಿಗೆ ಕಳಿಸುತ್ತೇನೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಇವತ್ತು ನೋಟೀಸ್ ಕಳಿಸಿದ್ದಾಗಿದೆ. ಮುಂದೆ ವಿಚಾರಣೆ ನಡೆಸುವುದು ಅವಶ್ಯಕವಾದರೆ ವಿಚಾರಣೆ ನಡೆಸುವ ಮಾರ್ಗ ಯಾವುದು, ಯಾರನ್ನು ವಿಚಾರಣೆ ಮಾಡಲು

(ಶ್ರೀ ಎಸ್. ನಿಜಲಿಂಗಪ್ಪ)

ನೇಮಕ ಮಾಡಬೇಕಾಗುತ್ತದೆ, ಇಬ್ಬರನ್ನು ನೇಮಕ ಮಾಡಬೇಕಾಗುತ್ತದೆಯೇ ಎಂಬುದನ್ನು ಅನಂತರ ವಿಚಾರ ಮಾಡಬೇಕಾಗುತ್ತದೆ. ಇದರಿಂದ ನನಗೆ ಕೀರ್ತಿ ಬರುವುದು ಮುಖ್ಯವಲ್ಲ. ಈ ಬಗ್ಗೆ ಹೊಲನು ಜಾಸ್ತಿ ಇದೆ. ಅದು ತೊಲಗಿ ಹೋಗುವುದು ಮುಖ್ಯ. ನೋಟೀಸ್‌ಗೆ ಉತ್ತರ ಗಳು ಬಂದಮೇಲೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಹಿಂದೆಮುಂದೆ ನೋಡುವುದಿಲ್ಲ.

ಇನ್ನು ಮಾನ್ಯ ಶಿವಪ್ಪನವರು ಏನು ಒಂದು ವಿಚಾರವನ್ನು ಪ್ರಸ್ತಾಪಮಾಡಿದರು, ಮುಖ್ಯ ಮಂತ್ರಿಯಾಗಿ ಇರುತ್ತಾರೋ ಅಥವಾ ಹೋಗುತ್ತಾರೋ ಎಂದು, ಆ ಬಗ್ಗೆ ನಾನು ಈ ಸಭೆಗೆ ಹೇಳಬೇಕಾಗಿಲ್ಲ. ಈ ವಿಚಾರವನ್ನು ಪದೇ ಪದೇ ಏಕೆ ಕೇಳುತ್ತಾರೋ ಗೊತ್ತಿಲ್ಲ. ಈ ವಿಚಾರದಲ್ಲಿ ಯಾರೋ ಒಬ್ಬ ಡ್ರೈರಿಸ್ಟ್ ಏನೋ ಬರೆದಿದ್ದಾನಂತೆ. ಅವನು ಬುದ್ಧಿ ಇಲ್ಲದ ಮನುಷ್ಯ. ಕುಚೇಷ್ಟೆಗೆ ಬರೆದಿದ್ದಾನೆಂದು ಕಾಣುತ್ತದೆ. It is mischievous, malacious and misleading.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಬ್ಲಿಟ್ಸ್ ಪತ್ರಿಕೆಯಲ್ಲಿ ಬರೆದಿರುವುದನ್ನು ನೋಡಿ ಕೇಳಿದ್ದು.

ಶ್ರೀ ಎಸ್. ನಿಜಲಿಂಗಪ್ಪ.—ಪೇಪರ್‌ನಲ್ಲಿ ಬರೆದಿರುವುದನ್ನೆಲ್ಲಾ ನೋಡಿ ಆ ಬಗ್ಗೆ ಈ ಸಭೆಯಲ್ಲಿ ಕಾಲಹರಣ ಮಾಡುವುದು ಸರಿಯಲ್ಲ. ಆದ್ದರಿಂದ ಈ ವಿಚಾರದಲ್ಲಿ ಏನೂ ಅಭಿಪ್ರಾಯ ಕೊಡಬೇಕಾದ್ದಿಲ್ಲ. ಹಿಂದೆಯೂ ಹೇಳಿದ್ದೇನೆ. ಯಾರಾದರೂ ಈ ಬಗ್ಗೆ ಏನಾದರೂ ಭ್ರಮೆಪಟ್ಟು ಕೊಂಡು ಮಾಡಬೇಕಾದ್ದು ಏನೂ ಇಲ್ಲ. ಅದು ನನಗೆ ಬಿಟ್ಟಿದ್ದು. ಆದ್ದರಿಂದ ನಾನು ಅದಕ್ಕೆ ಉತ್ತರ ಕೊಡತಕ್ಕದ್ದು ಅನಾವಶ್ಯಕ.

2-30 P.M.

†ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಒಂದು ವಿಷಯವನ್ನು ಸ್ಪಷ್ಟಪಡಿಸಿದರು. ಅವರು ಹೇಳಿದ್ದಾರೆ, ಮಂತ್ರಿಯವರ, ಎಕ್ಸ್–ಮಂತ್ರಿಗಳ, ಸೆಕ್ರೆಟರಿಗಳ ಎಲ್ಲಾ ಆಸ್ತಿಪಾಸ್ತಿಗಳ ಬಗ್ಗೆ, ಏನಿದೆ, ಎಷ್ಟಿದೆ ಎಂಬುದರ ಬಗ್ಗೆ ನೋಟೀಸ್ ಕೊಡುತ್ತೇನೆ ಎಂದು. ಅವರ ಉದ್ದೇಶ ಏನಿದೆ, ಅದು ನಿಜವಾಗಿಯೂ ಸಫಲವಾಗಬೇಕಾದರೆ, ಮತ್ತು ಅದನ್ನು ಕಾರ್ಯಗತಮಾಡಬೇಕಾಗಿದ್ದರೆ, ಅದು ಈ ಪತ್ರ ಬರೆದು, ನೋಟೀಸ್ ಕೊಟ್ಟು ಮಾಡಿದರೆ ಸಫಲವಾಗಲಾರದು. ಅವರು ಉತ್ತರ ಕೊಡಬಹುದು, ಅದನ್ನು ಬಿಸಾಡಿಬಿಡಬಹುದು. ನಿಮ್ಮ ಉದ್ದೇಶ ಏನಿದೆ, ಅದು ನಿಜವಾಗಿಯೂ ಕಾರ್ಯಗತವಾಗಬೇಕಾದರೆ ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡೋಣ ಮತ್ತು ಇದರ ಬಗ್ಗೆ ಹೇಗೆ ಮುಂದುವರಿಯಬೇಕೆಂಬುದನ್ನು ನೋಡಬೇಕು. ಇದಕ್ಕೆ ಈ ಒಂದು ಶಾಸಕಾಂಗದ ಮುದ್ರೆ ಬೇಕು. ಅದಕ್ಕೋಸ್ಕರ ಒಬ್ಬರೋ, ಇಬ್ಬರೋ ಇರುವ ಒಂದು ಕಮಿಶನ್ ಆಫ್ ಇನಕ್ವಾಯರಿ ಮಾಡಬೇಕು. ಪತ್ರ ಬರೆಯುತ್ತಾರೆ, ಮತ್ತು ಅದಕ್ಕೆ ಉತ್ತರ ಕೊಡುತ್ತಾರೆ ಎಂದು ಹೇಳಿದರೆ, ಅದು ಕೇವಲ ನಾಟಕೀಯವಾಗುತ್ತದೆ. ನೀವು ನಿಮಗೆ ಪತ್ರ ಬರೆಯುತ್ತೀರಾ? ನಿಮ್ಮ ವಿಚಾರ ಹೇಳಿದರೆ, ಅದು ಎಷ್ಟು ಇದೆ ಎಂಬುದನ್ನು ನೋಡ ಬಹುದು. ಆದ್ದರಿಂದ ಯಾವ ಸಂಶಯಕ್ಕೂ ಒಳಗಾಗದಿರಬೇಕಾದರೆ, ಇವತ್ತು ನೇರವಾಗಿ ಒಂದು ಕಮಿಶನ್ ಆಫ್ ಇನಕ್ವಾಯರಿ ನೇಮಕಮಾಡಿ. ಅದಕ್ಕೆ ನಮ್ಮೆಲ್ಲರ ಸಹಾನುಭೂತಿ ಇದೆ. ಇದನ್ನು ಅದಷ್ಟು ಜಾಗ್ರತೆ ಜಾರಿಮಾಡಿ, ನಿಮಗೆ ನಿಜವಾಗಿ ಮನಸ್ಸು ಇದ್ದರೆ, ಈ ಕಮಿಶನ್ ಮಾಡಿದರೆ, ನಿಮ್ಮ ಉದ್ದೇಶ ಸಾಧನೆಯಾಗುತ್ತದೆ; ಇಲ್ಲದಿದ್ದರೆ ಕೇವಲ ಪತ್ರವ್ಯವಹಾರ ಮಾಡುತ್ತೇವೆಂದು ಹೇಳಿದರೆ ಅದು ಸಾಧನೆಯಾಗಲಾರದು ಎಂದು ಹೇಳುತ್ತೇನೆ.

Sri H. N. NANJE GOWDA (Arkalgud)—We want to know the opinion of the Government whether they are in favour of *Lok Pal* and *Lok Ayukt*.

Mr. DEPUTY SPEAKER.—The matter has been already clarified.

Sri K. H. PATIL (Hubli).—On a matter of privilege.

Mr. DEPUTY SPEAKER.—I do not allow it. ಶ್ರೀ ಶಿವಪ್ಪನವರು ಹೇಳಿದ ಹಾಗೆ ಕಮಿಶನ್ ಮಾಡಬೇಕಾದರೆ, ಈ ಸಭೆಯ ನಿರ್ಣಯ ಆಗಬೇಕಾಗುತ್ತದೆ.